# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**


Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL/2005/16123 ಜುಲೈ - 2020 ಪುಟ:8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ-7 ಪ್ರಕಟಣೆ : 10-07-2020



● e-mail : jnanashakthisss@gmail.com ● whatsapp : 7795116598 ● Mobile : 9343361618


## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ



ಮನುಷ್ಯನ ಶ್ರೇಯೋಭಿವೃದ್ಧಿಗೆ ಪರಮಾತ್ಮನಲ್ಲಿ ಅತ್ಯಂತ ಭಕ್ತಿ, ಧರ್ಮಮಾರ್ಗಾವಲಂಬಿಯಾಗಿರುವುದು, ಉತ್ತಮ ಮಾರ್ಗವಾಗಿರುತ್ತದೆ. ಭಗವಂತನು ನಮ್ಮ ಎಲ್ಲ ಚಟುವಟಿಕೆಗಳನ್ನು ಗಮನಿಸುತ್ತಿರುತ್ತಾನೆ ಎಂದು ದೃಢವಾಗಿ ನಂಬಿರುವ ಭಕ್ತನು ಎಂದಿಗೂ ತಪ್ಪು ಮಾರ್ಗವನ್ನು ಹಿಡಿಯುವುದಿಲ್ಲ. ಅಂಥವನ ಮನಸ್ಸು ಯಾಗಾಗಲೂ ಸಾತ್ವಿಕ ಭಾವನೆಗಳಿಂದ ಕೂಡಿರುತ್ತದೆ. ಅವನು ಸರ್ವದಾ ಸತ್ಕರ್ಮಗಳಲ್ಲಿ ನಿರತನಾಗಿರುತ್ತಾನೆ.

ಆದರೆ ಸಾತ್ವಿಕ ಸ್ವಭಾವದವರಿಗೂ ಜೀವನದಲ್ಲಿ ಅತ್ಯಂತ ಕಷ್ಟಗಳನ್ನು ಎದುರಿಸಬೇಕಾದ ಸಂದರ್ಭವು ಬರುತ್ತಿದೆ. ಪರಮಾತ್ಮನು ಮನುಷ್ಯನು ಮಾಡಿರುವ ಕರ್ಮಗಳಿಗೆ ಅನುಸಾರವಾಗಿ ಪ್ರತಿಫಲವನ್ನು ನೀಡುವವನಾದ್ದರಿಂದ ಕಷ್ಟಗಳು ಹಿಂದಿನ ಜನ್ಮದಲ್ಲಿ ಮಾಡಿರಬಹುದಾದ ಪಾಪಕೃತ್ಯಗಳ ಫಲವೆಂದು ತಿಳಿದುಕೊಳ್ಳಬೇಕು.

ಈ ನಂಬಿಕೆಯಿಂದ ಮನುಷ್ಯನು ಜೀವನವನ್ನು ನಡೆಸಬೇಕು. ಆದರೆ, ಭಗವಂತನ ಮೇಲಿರುವ ನಂಬಿಕೆಯನ್ನು ಲೇಶಮಾತ್ರವೂ ಕಡಿಮೆ ಮಾಡಿಕೊಳ್ಳಬಾರದು. ಅಂತಹ ಭಕ್ತನಿಗೆ ಮಾನಸಿಕ ಶಾಂತಿ ಮತ್ತು ಶಕ್ತಿಯನ್ನು ಭಗವಂತನು ಅನುಗ್ರಹಿಸುವನು.

ಭಗವಂತನ ಮೇಲಿನ ಭಕ್ತಿ ಮತ್ತು ಶ್ರದ್ಧೆಗಳನ್ನು ಉಳಿಸಿಕೊಂಡ ಭಕ್ತನಿಗೆ ಕಷ್ಟಗಳೂ ಸುಖಪ್ರದವಾಗಿ ಪರಿಣಮಿಸುತ್ತವೆ ಎಂದು ಶ್ರೀಮದ್ ಭಾಗವತವು ತಿಳಿಸುತ್ತದೆ.

**ಸ್ವರ್ಗಾಪವರ್ಗಯೋಃ ಪುಂಸಾಂ ರಸಾಯಾಂ ಭುವಿ ಸಂಪದಾಂ ।**
**ಸರ್ವಾಸಾಮಪಿ ಸಿದ್ಧೀನಾಂ ಮೂಲಂ ತಚ್ಚರಣಾರ್ಚನಂ ॥**

ಭಗವಂತನ ಪಾದಸೇವೆಯೊಂದೇ ಭಕ್ತನ ಶ್ರೇಯಸ್ಸಿಗೆ ಕಾರಣ ಮತ್ತು ಅನುಗ್ರಹಕ್ಕೆ ಹೇತು ಎಂದು ಇದರಿಂದ ತಿಳಿದುಬರುವುದು. ಇದನ್ನು ಮನನ ಮಾಡಿಕೊಂಡು ಪರಮಾತ್ಮನಲ್ಲಿ ಶ್ರದ್ಧಾಭಕ್ತಿಯನ್ನು ಇರಿಸಿಕೊಂಡು ಜೀವನವನ್ನು ನಡೆಸಲಿ ಎಂದು ಆಶೀರ್ವದಿಸುತ್ತಿದ್ದೇವೆ.

**ಕೃಪೆ : ಶ್ರೀ ಶಂಕರ ಕೃಪಾ**

---

### ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
**ಕೋಡಿಯಾಲ್‌ಬೈಲ್, ಮಂಗಳೂರು - 575 003**

### ಪ್ರಕಟಣೆ

**2019-'20ನೇ ಸಾಲಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಭೆಯು ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಈ ಕೆಳಗಿನಂತೆ ರೂ. 81.88 ಲಕ್ಷವನ್ನು ತೊಡಗಿಸಿದೆ.**

| | |
|---|---|
| 1. 49 ವಿದ್ಯಾರ್ಥಿಗಳಿಗೆ ಸಾಲ ವಿದ್ಯಾರ್ಥಿವೇತನ | ರೂ. 58,15,000-00 |
| 2. 74 ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿವೇತನ | ರೂ. 3,74,000-00 |
| 3. ದಾನಿಯಿಂದ ನೇರ ವಿದ್ಯಾರ್ಥಿಗಳಿಗೆ ಯೋಜನೆಯಲ್ಲಿ 100 ಜನ ವಿದ್ಯಾರ್ಥಿಗಳಿಗೆ | ರೂ. 2,09,000-00 |
| 4. ಸಾಲ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ಬಡ್ಡಿಯ ಬಗ್ಗೆ ಸಹಾಯಧನ | ರೂ. 17,90,080-00 |
| **ಒಟ್ಟು :** | **ರೂ. 81,88,080-00** |

ಶ್ರೀ ಸಭಾದ ಸಾಲ ವಿದ್ಯಾರ್ಥಿವೇತನ ನಿಧಿಯು ರೂ. 191.54 ಲಕ್ಷಕ್ಕೆ ತಲುಪಿದೆ. ಇದರಿಂದ ರೂ. 184.54 ಲಕ್ಷ ಸಾಲ ವಿದ್ಯಾರ್ಥಿವೇತನ ವಿತರಿಸಲಾಗಿದೆ.

ಶ್ರೀ ಸಭೆಯ ವಿದ್ಯಾರ್ಥಿವೇತನ ನಿಧಿಗೆ ಧನಸಹಾಯ ಮಾಡಿದ ಎಲ್ಲಾ ಸಮಾಜ ಬಾಂಧವರಿಗೆ ಧನ್ಯವಾದಗಳು.

**ಕೆ. ಹರ್ಷಕುಮಾರ್**
ಅಧ್ಯಕ್ಷರು

**ಕರುಣ್ ರಾವ್ ಬೆಳ್ಳೆ**
ಕಾರ್ಯದರ್ಶಿ

**ಡಾ. ಎ. ಪಿ. ಕೃಷ್ಣ**
ಅಧ್ಯಕ್ಷರು
ವಿದ್ಯಾರ್ಥಿವೇತನ ಸಮಿತಿ

---

### ವಿದ್ಯಾಭ್ಯಾಸ ಸಮಿತಿ
**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

### ಪ್ರಕಟಣೆ

ತಾ. 10–6–2020

ಇತ್ತೀಚಿನ ದಿನಗಳಲ್ಲಿ ಸಂಭವಿಸಿದ ಕೊರೋನಾ ಮಹಾಮಾರಿ ಯಿಂದಾಗಿ ದೇಶದೆಲ್ಲೆಡೆ ತೀವ್ರ ಆರ್ಥಿಕ ಹಿಂಜರಿತ ತಲೆದೋರಿದೆ. ಈ ಆರ್ಥಿಕ ಹಿನ್ನಡೆ ಮತ್ತು ಅದರೊಂದಿಗೆ ಬೆಸೆದುಕೊಂಡಿರುವ ಉದ್ಯೋಗ ನಷ್ಟ, ವ್ಯಾಪಾರ ನಷ್ಟ ಇತ್ಯಾದಿ ಕಾರಣಗಳಿಂದ ನಮ್ಮ ಸಮಾಜದ ಹಲವರು ತೀವ್ರತರವಾದ ಹಣಕಾಸಿನ ಕೊರತೆಯನ್ನು ಅನುಭವಿಸುತ್ತಿರಬಹುದು. ಈ ಆರ್ಥಿಕ ಸಂಕಷ್ಟ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೂ ಅಡಚಣೆ ಒಡ್ಡಬಹುದು. ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು ಆರ್ಥಿಕ ಹಿನ್ನಡೆಯಿಂದಾಗಿ ಸಮಾಜದ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಕಾಶ ದಿಂದ ವಂಚಿತರಾಗಬಾರದೆಂಬ ಕಳಕಳಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಹಣಕಾಸಿನ ಅಗತ್ಯವಿರುವ ನಮ್ಮ ಸಮಾಜದವರನ್ನು ಗುರುತಿಸಿ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಕರ್ತವ್ಯವೆಂದು ಭಾವಿಸುತ್ತದೆ. ಈ ಕಠಿಣ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಒಂದು ಯೋಜನೆ ಹಮ್ಮಿಕೊಂಡಿದೆ.

**ಯೋಜನೆಯ ಹೆಸರು :**

**ಕೊರೋನಾದಿಂದಾಗಿ ಆರ್ಥಿಕ ಸಂಕಷ್ಟಕ್ಕೊಳಗಾದವರಿಗಾಗಿ ವಿದ್ಯಾಭ್ಯಾಸ ಸಹಾಯ ಯೋಜನೆ.**


*(7ನೇ ಪುಟಕ್ಕೆ ಮುಂದುವರಿಯುವುದು)*

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್, ಪುತ್ತೂರು**
ಮೊಬೈಲ್ : 9448481696



ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**

**ಎಂ. ಎಸ್. ರಘುನಾಥ ರಾವ್**
ಅವರ
ಅಕ್ಷರಯಾನ
**(ಸವೆದ ಹಾದಿಯಲ್ಲಿ ಮಾಸದ ಹೆಜ್ಜೆಗಳು)**
ಪುಸ್ತಕ ಬಿಡುಗಡೆಗೊಂಡಿದೆ.

**ಬೆಲೆ : ಸದುಪಯೋಗ**

**ಆಸಕ್ತರು 9606375166ಗೆ ವಾಟ್ಸಾಪ್ ಮಾಡಿ.**
**(ಪ್ರತಿಗಳು ಮುಗಿಯುವ ತನಕ ಕಳುಹಿಸಿಕೊಡಲಾಗುವುದು)**

## ಹೃದಯ ಕಮಲ

ಹೃದಯ ಕಮಲವಿಲ್ಲದವರಲ್ಲಿ ಇರಲೊಲ್ಲೆಯ್ಯಾ ನೀನು
ಹಾಡಿದಳು ಆ ಮಹಾತಾಯಿ ಅಕ್ಕಮಹಾದೇವಿ!
ಇದೆ ಎಲ್ಲರೊಳು ಹೃದಯ 'ಕಮಲ'ವಾಗಿಸಿ ಅದನು
ನಾ ಕಾಣೆ ಅದರಷ್ಟು ಪ್ರಾಮಾಣಿಕತೆಯ ಅನ್ಯರೊಳು
ತಾಯ ಬಸಿರಲ್ಲೇ ಅದರ ಬಡಿತ ಮಿಡಿತ
ಹುಟ್ಟಿನಿಂ ಅದರ ಚಲನೆ ಚಾಲನೆ ಚಟುವಟಿಕೆ ನಿರಂತರ!
ದುರ್ವ್ಯಸನಿಗಳ, ದುರಾಚಾರಿಗಳ, ಅತಿಭೋಜನ ಪ್ರಿಯರ
ದುಶ್ಚಟಗಳ, ಪರಿಣಾಮ ಹೃದಯದೊಳಗೆ
ಹೇ ಮನುಜಾ ನಿನ್ನೀ ಅಸಮರ್ಪಕ ಚಟುವಟಿಕೆಗಳಿಗೆ ನೀ
ಮಣಿಯದಿರು, ದಣಿಸದಿರು, ದುರ್ಬಲಗೊಳಿಸದಿರು
ಬರಿಯ ಒತ್ತಡ ನೀಡದಿರು ಸಹಿಸಬಲ್ಲುದೇ ಹೃದಯಕಮಲ?
ಅತಿ ಆಸೆ, ಕ್ರೋಧ, ಅಸೂಯೆಗಳ ತ್ಯಜಿಸು
ಸರಳ, ಸಹಜ ಶಾಂತಚಿತ್ತನಾಗು
ನೇಮ, ನಿಯಮ, ಸಂಯಮದಿಂದಿರು
ಸ್ನೇಹ, ಪ್ರೀತಿ, ನೆಮ್ಮದಿಯ ಮನದೊಳಿರಿಸಿ,
ಆ ದೇವನ ಹೃದಯ ಕಮಲದೊಳಿರಿಸಿ
ಶತ ಶತಮಾನಗಳ ಕಾಲ ಪ್ರಕೃತಿಯ ಜೊತೆ ಜೊತೆಗೆ ಬಾಳು

**– ಶ್ರೀಮತಿ ಸ್ನೇಹಲತಾ ದಿವಾಕರ್, ಮಂಗಳೂರು**
**ಮೊಬೈಲ್ : 7022737312**

# ಪ್ರಕಟಣೆ

**1**

2020–2021ನೇ ಸಾಲಿನಲ್ಲಿ ಪಿ.ಯು.ಸಿ. ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನವನ್ನು ಪಡೆಯಲು ದಿನಾಂಕ 30–11–2020ರ ಒಳಗೆ ತಲುಪುವಂತೆ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ.**

1) ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ.ಸಿ. ರೋಡ್, ಕಾರ್ಕಳ ಹಾಗೂ ವಿಟ್ಲ ಶಾಖೆಗಳು
2) ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್ಸ್, ಕರಂಗಲ್ಪಾಡಿ, ಮಂಗಳೂರು
3) ಶ್ರೀ ಬಿ. ಎಸ್. ಅನಿಲ್ ರಾವ್, ವಿಶ್ರಾಮ್ ಮೋಟಾರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
4) ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
5) ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ
6) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ
7) ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ
8) ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು
9) ಶ್ರೀ ಎಮ್. ಎಸ್. ಅರುಣ್‌ಕುಮಾರ್, ದಿಶಾ ಬೇಕರಿ, ಉಜಿರೆ
10) ಶ್ರೀ ಜಗದೀಶ್ ರಾವ್, ಕಾರ್ಯದರ್ಶಿ, ಆದಿಶಂಕರ ಬ್ರಾಹ್ಮಣಸಭಾ, ಮೂಡಬಿದ್ರೆ
11) ಶ್ರೀ ಕೆ. ರತ್ನಾಕರ್ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಠಾನ ಕಾರ್ಕಳ, ಚತುರ್ಮುಖ ಬಸದಿ ಹತ್ತಿರ, ಕಾರ್ಕಳ
12) ಶ್ರೀ ನೆಕ್ರೆ ಶಿವರಾವ್, ಕಾರ್ಯದರ್ಶಿ, ಶಂಕರ ಪ್ರತಿಷ್ಠಾನ, ಕಾರ್ಕಳ
13) ಶ್ರೀ ಎಮ್. ಕೆ. ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ
14) ಶ್ರೀ ಎಂ. ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
15) ಶ್ರೀ ಎನ್. ಎಸ್. ನಟರಾಜ್, ಪುತ್ತೂರು
16) ಡಾ. ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ
17) ಶ್ರೀ ಬಿ. ಭಾಸ್ಕರ್ ರಾವ್, ಬಯಂಬು, ಸುಳ್ಯ
18) ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರಿ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು

ದಿನಾಂಕ : 08–06–2020

**ಶ್ರೀ ಕರುಣ್ ರಾವ್ ಬೆಳ್ಳೆ**
(ಕಾರ್ಯದರ್ಶಿ)

**2**

ಶ್ರೀಮತಿ ಶ್ಯಾಮಲ ಎಸ್. ರಾವ್ ತಮ್ಮ ಪತಿ ಶ್ರೀ ಎ. ಸೂರ್ಯಪ್ರಕಾಶ್ ರಾವ್ ಇವರ ಸ್ಮರಣಾರ್ಥ ನಮ್ಮ ಸಮಾಜದ ಬಡಕುಟುಂಬದಿಂದ ಬರುವ ಎಸ್.ಎಸ್.ಎಲ್.ಸಿ.ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2020–2021ನೇ ಸಾಲಿನ ಮೇಲಿನ ಪ್ರೋತ್ಸಾಹಧನವನ್ನು ಶ್ರೀ ಸಭೆಯು ನವಂಬರ್ 2020ರಲ್ಲಿ ನಡೆಯುವ ನಾಡಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30–11–2020ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ದಿನಾಂಕ : 08–06–2020

**ಶ್ರೀ ಕರುಣ್ ರಾವ್ ಬೆಳ್ಳೆ**
(ಕಾರ್ಯದರ್ಶಿ)

**3**

ಶ್ರೀ ಕೂಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000 /– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನ್‌ಭಾಗರ ಸ್ಮಾರಕ ನಿಧಿಯನ್ನು ರೂ. 1,00,000/– ವಂತಿಗೆಯೊಂದಿಗೆ ಸ್ಥಾಪಿಸಿ ಸಿಎ ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2020–2021ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ನವಂಬರ್ 2020ರಲ್ಲಿ ನಡೆಯುವ ನಾಡಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30–11–2020ರ ಒಳಗೆ ತಲುಪುವಂತೆ **ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

**ಶ್ರೀ ಕರುಣ್ ರಾವ್ ಬೆಳ್ಳೆ**
ದಿನಾಂಕ : 08–06–2020
(ಕಾರ್ಯದರ್ಶಿ)

# ಹಳೆಯ ನೆನಪುಗಳು ಮರುಕಳಿಸಿ ಮತ್ತೆ ಕಣ್ಣಮುಂದೆ ಬರಲು ಕೆಲವೊಮ್ಮೆ ಕಾರಣಗಳು ಇರಬಹುದು...





**ವೃತ್ತಿ ಜೀವನದಲ್ಲಿ ಸಾಗಿಬಂದ ದಾರಿ :** ISROನ ಪ್ರತಿಷ್ಠಿತ ಅಂಗಸಂಸ್ಥೆಯಾದ Liquid Propulsion Systems Centre, Trivandrumನಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದರು. ಈ ಸಂಸ್ಥೆಯಲ್ಲಿ ಸುಮಾರು ಹತ್ತು ವರುಷ ಕಾಲ ದುಡಿದು ಆ ಕಾಲಘಟ್ಟದಲ್ಲಿ ರಾಕೆಟ್ ಉಡಾವಣೆಗೆ ಬೇಕಾಗುವ ಇಂಧನವನ್ನು ತಯಾರಿಸುವ ಮತ್ತು ಪೂರೈಸುವ ಮಹತ್ತರ ಜವಾಬ್ದಾರಿಯನ್ನು ವಹಿಸಿಕೊಂಡರು. 2002ರಲ್ಲಿ ಅವರನ್ನು ISROನ ಬೆಂಗಳೂರು ಶಾಖೆಗೆ ಕರೆಸಿಕೊಂಡು Solar Electrical Propulsion Systemನ್ನು ಅಭಿವೃದ್ಧಿಪಡಿಸುವ ಮಹತ್ತರ ಜವಾಬ್ದಾರಿಯನ್ನು ವಹಿಸಿ ಕೊಡಲಾಯಿತು. ಈ ಕಠಿಣ ಸವಾಲನ್ನು Russian Space Agencyಯ ಸಹಭಾಗಿತ್ವದಲ್ಲಿ ಫಲಪ್ರದವಾಗಿ ನಿರ್ವಹಿಸಿದ ಕೀರ್ತಿ ಕೃಷ್ಣಮೋಹನರಿಗೆ ಸಲ್ಲುತ್ತದೆ.

ಹಳೆಯ ನೆನಪುಗಳು ಮರುಕಳಿಸಿ ಮತ್ತೆ ಕಣ್ಣಮುಂದೆ ಬರಲು ಕೆಲವೊಮ್ಮೆ ಕಾರಣಗಳು ಇರಬಹುದು, ಇಲ್ಲದೆಯೂ ಇರಬಹುದು. ಇತ್ತೀಚಿನ ಒಂದು ಸಂತೋಷದ ಸಿಹಿಸುದ್ದಿ ನನಗೆ ಹಳೆ ಘಟನೆಗಳನ್ನು ಮೆಲುಕು ಹಾಕುವಂತೆ ನನ್ನ ಮನಸ್ಸಿನ ಪರದೆಯ ಮೇಲೆ ಸ್ಫುಟವಾಗುತ್ತಿವೆ.

ಹಲವು ವರ್ಷಗಳ ಹಿಂದೆ ನಾನು ಶಾಲೆಗೆ ಹೋಗುತ್ತಿದ್ದ ಪ್ರಾಯದಲ್ಲಿ ಒಂದು ಸಲ ನನ್ನ ತಂದೆಯವರಾದ ಶಂಕರನಾರಾಯಣಯ್ಯ ಮತ್ತು ತಾಯಿ ರಾಧಮ್ಮ ಜತೆ ನನ್ನ ತಾಯಿಯ ಅಕ್ಕ ಕಮಲಮ್ಮನ ಮನೆಗೆ ಹೋಗಿದ್ದೆ. ಪ್ರಸಿದ್ಧ ಕೂಡ್ಲು ಮನೆತನದ ಯೆರೆಪ್ಪಾಡಿ ವಿಷ್ಣು ಶಾನುಭೋಗರ ಮನೆ. ಆ ಕಾಲದಲ್ಲಿ ಡ್ರೈವರ್ ಸಹಿತ ಕಾರುಗಳನ್ನು ಇರಿಸಿಕೊಂಡಿದ್ದ ಘನಸ್ಥಿಕೆಯ ಕುಟುಂಬ. ಶ್ರೀಯುತರಿಗೆ ಹೆಚ್ಚು ಕಡಿಮೆ ನನ್ನ ವಯೋಮಾನದ ಮಕ್ಕಳು. ಇಬ್ಬರು ಹುಡುಗಿಯರು, ನಾಲ್ಕು ಜನ ಹುಡುಗರು. ಊಟವಾದ ಮೇಲೆ ವಿಶಾಲ ಚಾವಡಿಯಲ್ಲಿ ಮನೆಯ ಹಿರಿಯ ಕಿರಿಯರೆಲ್ಲಾ ಸೇರಿದ ಒಂದು ರೀತಿಯ ಜನರಲ್ ಬಾಡಿ ಸಭೆ. ನನ್ನ ದೊಡ್ಡಮ್ಮನ ಘನ ಅಧ್ಯಕ್ಷತೆ. ಮಾತಿನ ವಿಷಯಗಳು ಹೊರಳುತ್ತಾ ಮಕ್ಕಳಾದ ನಮ್ಮ ಮುಂದಿನ ವಿದ್ಯಾಭ್ಯಾಸ, ಉದ್ಯೋಗದ ಕಡೆ ತಿರುಗಿತು. ಒಬ್ಬೊಬ್ಬರಲ್ಲೂ ಮುಂದೆ ನೀನು ಏನಾಗಬೇಕೆಂದಿರುವಿ ಎಂದು ವಿಚಾರಿಸುತ್ತಿದ್ದರು. ಮಕ್ಕಳು ತಮಗೆ ಆ ಕ್ಷಣಕ್ಕೆ ತೋಚಿದ ಉದ್ಯೋಗದ ಹೆಸರು ಹೇಳುತ್ತಿದ್ದರು. ಅವರು ಇಂದು ಏನಾಗಿದ್ದಾರೆ ಎಂಬುದು ಈಗ ಪ್ರಸ್ತುತವಲ್ಲ. ಅಲ್ಲಿ ನೆರೆದ ಎಲ್ಲ ಮಕ್ಕಳೂ ನನ್ನನ್ನೂ ಸೇರಿಸಿ ತಮ್ಮ ತಮ್ಮ ವೃತ್ತಿಯಲ್ಲಿ ತಮ್ಮದೇ ಆದ ನೆಲೆ ಕಂಡುಕೊಂಡು ಸಮಾಜದಲ್ಲಿ ಗುರುತಿಸಿಕೊಂಡಿದ್ದೇವೆ ಎಂಬುದು ಹೆಮ್ಮೆಯ ವಿಚಾರ.

ಪ್ರಸ್ತುತ ನೆನಪಾಗುವುದು ನಮ್ಮ ಕೃಷ್ಣಮೋಹನನ ಉತ್ತರ. ನನಗಿಂತ ಏಳೆಂಟು ವರ್ಷ ಕಿರಿಯವನಾದ ಹುಡುಗ ಹೇಳಿದ ಮಾತು – ನಾನು ಖಗೋಳ ವಿಜ್ಞಾನಿ ಆಗಬೇಕೆಂದು. ಆ ಮಾತು ನಿಜವಾಯಿತು. ಮಾತ್ರವಲ್ಲ, ನಮ್ಮ ಭಾರತದ ವೈಜ್ಞಾನಿಕ ಸಂಶೋಧನಾ ರಂಗದ ಶಿಖರರತ್ನವಾದ ISROದಲ್ಲಿ ಇಂದು ಕೃಷ್ಣಮೋಹನ್ ಜನರಲ್ ಮೆನೇಜರ್.

**ಬೆಳೆದುಬಂದ ದಾರಿ :** ಕೂಡ್ಲು ದಿವಂಗತ ಪ್ರೇಮಾವತಿ ಅಮ್ಮ ಹಾಗೂ ವಿಷ್ಣು ಶಾನುಭೋಗರ ನಾಲ್ಕನೇ ಮಗನಾಗಿ 10-05-1966ರಲ್ಲಿ ಜನನ.

**ಹುಟ್ಟಿದೂರು :** ಕಾಸರಗೋಡಿನ ಪಕ್ಕದ ಹಳ್ಳಿ ಯೆರೆಪ್ಪಾಡಿ.

**ವಿದ್ಯಾಭ್ಯಾಸದ ಪ್ರಯಾಣ :** ಕೃಷ್ಣಮೋಹನ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಾಸರಗೋಡಿನ BEM ಹೈಸ್ಕೂಲಿನಲ್ಲಿ ಮತ್ತು ಪಿ.ಯು.ಸಿ.ಯನ್ನು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಪೂರೈಸಿದರು. 1988ರಲ್ಲಿ B.Tech., Mechanical Engineeringನ್ನು National Institute of Technology, Bhopalನಿಂದ ಉನ್ನತ ಶ್ರೇಣಿಯೊಂದಿಗೆ ಗಳಿಸಿದರು. M.Tech. ವ್ಯಾಸಂಗವನ್ನು ಪ್ರತಿಷ್ಠಿತ NITK Surathkalನಲ್ಲಿ ಪೂರೈಸಿದರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಂಶೋಧನಾ ಪ್ರಾವೀಣ್ಯತೆ ಪ್ರದರ್ಶಿಸಿ ಹಲವಾರು ಸಂಶೋಧನಾ ಲೇಖನವನ್ನು ದೇಶೀಯ ಹಾಗೂ ಅಂತರ್ದೇಶೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದರು.

ಇವರ ಮುಂದಾಳುತನದಲ್ಲಿ ISROದಿಂದ ಎರಡು ಸೋಲಾರ್ ಇಲೆಕ್ಟ್ರಿಕ್ ಪವರ್ ಚಾಲಿತ ಸ್ಯಾಟಲೈಟ್‌ಗಳು ಉಡಾಯಿಸಲ್ಪಟ್ಟವು. ಆ ಮೂಲಕ ನಮ್ಮ ಭಾರತ ದೇಶ ಈ ವರ್ಗದಲ್ಲಿ ಪ್ರಪಂಚದ ಐದನೆಯ ದೇಶವೆಂಬ ಹೆಮ್ಮೆಗೆ ಪಾತ್ರವಾಯಿತು. ಈ ಗರಿಮೆಯನ್ನು ಗಮನಿಸಿ ಕೃಷ್ಣಮೋಹನರಿಗೆ 'ಇಸ್ರೊ ಟೀಮ್ ಅವಾರ್ಡ್'ನ್ನು ಕೊಟ್ಟು ಸನ್ಮಾನಿಸಲಾಯಿತು.

2014ರಲ್ಲಿ ಇವರಿಗೆ ಡೆಪ್ಯುಟಿ ಪ್ರೊಜೆಕ್ಟ್ ಡೈರೆಕ್ಟರ್ GSA T-11 ಎಂಬ ಜವಾಬ್ದಾರಿಯನ್ನು ಕೊಟ್ಟಿತು. ಆ ಮೂಲಕ ಭಾರತದ ಅತ್ಯಂತ ಭಾರಯುತ GSA T-11ನ್ನು French Guyanaದಿಂದ ಉಡಾಯಿಸುವಲ್ಲಿ ಇವರ ಸಾಧನೆ ಗಣನೀಯ. ಈ ಮಹತ್ತರವಾದ ಸ್ಯಾಟಲೈಟ್ ನಮ್ಮ ಇಂದಿನ ಪ್ರಧಾನಮಂತ್ರಿಗಳ ಡಿಜಿಟಲ್ ಇಂಡಿಯಾ ಕಲ್ಪನೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಇಸ್ರೋದ ಉನ್ನತ ಗುರಿಯನ್ನು ಸಾಕಾರಗೊಳಿಸುವಲ್ಲಿ ಸಹಕಾರಿಯಾಗಲು ಕೂಡ್ಲು ಕೃಷ್ಣಮೋಹನ ಶಾನುಭೋಗರನ್ನು General Manager Spacecraft Propulsion System Integrating and Testing ಆಗಿ ನಿಯುಕ್ತಗೊಳಿಸಿದೆ. ಇಸ್ರೋವು ತನ್ನ ಮುಂದಿನ ಬೃಹತ್ತರ ಬಹು ಮಹತ್ವಾಕಾಂಕ್ಷೆಯ ಯೋಜನೆ (Project)ಯಾದ 'ಗಗನಯಾನ (Human Space Mission) ಮತ್ತು ಚಂದ್ರಯಾನ–3'ನ್ನು ಗೊತ್ತುಪಡಿಸಿಕೊಂಡಿದೆ.

ಭಾರತ ದೇಶದ ಈ ಬಹು ಮಹತ್ವಾಕಾಂಕ್ಷೆಯ ಬಾಹ್ಯಾಕಾಶ ಕನಸನ್ನು ನನಸಾಗಿಸುವಲ್ಲಿ ನಮ್ಮ ಸಮಾಜದವರಾದ ಕೃಷ್ಣಮೋಹನರ ಕೊಡುಗೆ ಇನ್ನಷ್ಟು ಹರಿದುಬರಲಿ, ಆ ಮೂಲಕ ಅದರ ಕೀರ್ತಿ ಅವರಿಗೂ, ಅವರು ಪ್ರತಿನಿಧಿಸುವ ನಮ್ಮ ಸಮಾಜಕ್ಕೂ ದೊರಕಲಿ ಎಂಬ ಹಾರೈಕೆ.

**ಕುಟುಂಬ ಜೀವನ :** 25 ವರ್ಷಗಳ ಹಿಂದೆ ಕೇದಿಗೆ ಮನೆತನದ ಪ್ರಹ್ಲಾದರಾಯರ ಪುತ್ರಿ ಕವಿತಾಳನ್ನು ವಿವಾಹವಾದರು. ಇವರ ದಾಂಪತ್ಯದ ಫಲ ಶ್ರಾವ್ಯ ಮತ್ತು ಶ್ರೇಯ ಎಂಬ ಬುದ್ಧಿವಂತ ಹೆಣ್ಣುಮಕ್ಕಳು. ಪತ್ನಿ ಕವಿತಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೆನೇಜರ್ ಹುದ್ದೆಯಿಂದ ಸ್ವಯಂನಿವೃತ್ತಿ ಹೊಂದಿ ಈಗ ತಮ್ಮದೇ ಆದ ಆರ್ಥಿಕ ಸಲಹಾ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಬೆಂಗಳೂರಿನ ಬಸವನಗರದಲ್ಲಿ ತಮ್ಮ ಸ್ವಂತ ಮನೆ 'ವಿನ್ಯಾಸ'ದಲ್ಲಿ ಇವರು ವಾಸಿಸುತ್ತಿದ್ದಾರೆ. ತಮ್ಮ ಕುಟುಂಬದ ಇತರ ಸದಸ್ಯರಂತೆ ಕಲೆಯಲ್ಲಿ ಬಹಳ ಆಸಕ್ತಿಯುಳ್ಳವರಾಗಿದ್ದಾರೆ. ಸ್ವತಃ ಆಕಾಶವಾಣಿ 'ಬಿ ಗ್ರೇಡ್' ಮೃದಂಗವಾದಕರಾಗಿ ಕಲಾರಂಗದಲ್ಲೂ ತಮ್ಮದೇ ಆದ ಕಂಪನ್ನು ಪಸರಿಸುತ್ತಿದ್ದಾರೆ. ಬೆಂಗಳೂರಿನ ಹಲವಾರು ಸಂಗೀತ ಕಛೇರಿಗಳಲ್ಲಿ ಮೃದಂಗ ವಾದಕರಾಗಿ ಮಿಂಚುತ್ತಿದ್ದಾರೆ.

ಕೃಷ್ಣಮೋಹನರ ವೃತ್ತಿಜೀವನ ಉತ್ತುಂಗ ಶಿಖರಕ್ಕೇರಲಿ, ಅವರ ಕುಟುಂಬ ಜೀವನದಲ್ಲಿ ಶಾಂತಿ, ಸಂತೃಪ್ತಿ, ಸಮೃದ್ಧಿ ತುಂಬಿ ತುಳುಕಲಿ ಎಂದು ತುಂಬುಹೃದಯದ ಹಾರೈಕೆಗಳು. ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಕೃಷ್ಣಮೋಹನರಿಗೆ ಶುಭಾಶಯ ಹಾರೈಸುತ್ತಾ ಅವರ ನಡೆ ಮುಂದಿನ ಜನಾಂಗಕ್ಕೆ ಸ್ಫೂರ್ತಿಯಾಗಲಿ ಎಂದು ಬಯಸುತ್ತದೆ.

– ***ಡಾ. ಎ. ಪಿ. ಕೃಷ್ಣ,*** *ಉಪಾಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು*


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***




ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

# ಪುಸ್ತಕ ಬಿಡುಗಡೆ ಸಮಾರಂಭದ ವರದಿ

**ಕೃತಿ : ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಕಣ್ಮಣಿಗಳು ● ಲೇಖಕ : ಎನ್. ಪದ್ಮನಾಭ ರಾವ್**




**ಎಡದಿಂದ ಬಲಕ್ಕೆ : ಶ್ರೀ ಎನ್. ಪದ್ಮನಾಭ ರಾವ್, ಲೇಖಕರು, ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ; ಶ್ರೀ ಎನ್. ಸಂತೋಷ ಹೆಗ್ಡೆ, ನಿವೃತ್ತ ನ್ಯಾಯಮೂರ್ತಿ ಹಾಗೂ ಮಾಜಿ ಲೋಕಾಯುಕ್ತರು; ಡಾ. ಎಚ್. ಎಸ್. ದೊರೆಸ್ವಾಮಿ, ಶತಾಯುಷಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು; ಶ್ರೀ ಎ. ಟಿ. ರಾಮಸ್ವಾಮಿ, ಶಾಸಕರು; ಶ್ರೀಮತಿ ಬಿ. ಟಿ. ಲಲಿತ ನಾಯಕ್, ಮಾಜಿ ಸಚಿವರು, ಲೇಖಕಿ, ಸಾಮಾಜಿಕ ಹೋರಾಟಗಾರ್ತಿ ಮತ್ತು ಶ್ರೀ ರಂಗಾಚಾರಿ, ಪ್ರಕಾಶಕರು, ಬೆಂಗಳೂರು**

ದಿನಾಂಕ 29–02–2020ನೇ ಶನಿವಾರ ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ 'ಶಾಸಕ ಭವನ ಸಮ್ಮೇಳನ ಸಭಾಂಗಣ'ದಲ್ಲಿ ಜರುಗಿದ ಶ್ರೀ ಎನ್. ಪದ್ಮನಾಭ ರಾವ್‌ರವರು ರಚಿಸಿದ 'ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಕಣ್ಮಣಿಗಳು' ಎಂಬ ಕೃತಿಯನ್ನು ಹಿರಿಯ ಮುತ್ಸದ್ದಿ, ಸರಳ, ಸಜ್ಜನ, ಶತಾಯುಷಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸನ್ಮಾನ್ಯ ಡಾ. ಎಚ್. ಎಸ್. ದೊರೆಸ್ವಾಮಿಯವರು ಬಿಡುಗಡೆ ಗೊಳಿಸಿದರು. 'ಇವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರಬರಲಿ, ಶ್ರೀ ಎನ್. ಪದ್ಮನಾಭ ರಾವ್‌ರವರ ಕನ್ನಡ ನಾಡು, ನುಡಿಯ ಸೇವೆ ನಿರಂತರವಾಗಿರಲಿ' ಎಂದು ಹಾರೈಸಿದರು.

ಅನಂತರ ಸನ್ಮಾನ್ಯ ಶ್ರೀ ಎನ್. ಸಂತೋಷ್ ಹೆಗ್ಡೆಯವರು, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಮತ್ತು ಕರ್ನಾಟಕ ಲೋಕಾಯುಕ್ತದ ನಿವೃತ್ತ ಲೋಕಾಯುಕ್ತರು ಮುಖ್ಯ ಅತಿಥಿಗಳಾಗಿ ಬಂದು ತಮ್ಮ ಅಮೂಲ್ಯವಾದ ಜೀವನ ಮೌಲ್ಯಗಳನ್ನು ತಮ್ಮದೇ ಆದ ಸ್ವಾರಸ್ಯಕರ ಮಾತುಗಳಿಂದ 'ಈ ದಿನ ಜನ ಯಾರೂ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿಕೊಳ್ಳುವುದಿಲ್ಲ. ಮಾನವೀಯತೆ, ದೇಶಾಭಿಮಾನ ಮಾಯವಾಗುತ್ತಿದೆ ಎಂದು ಕೆಲವು ಉದಾಹರಣೆಗಳನ್ನು ನೀಡಿ ತಮ್ಮ ಬೇಸರ ವ್ಯಕ್ತಪಡಿಸಿದರು. ಜೀವನದಲ್ಲಿ ದೇಶಾಭಿಮಾನ ಮತ್ತು ಮಾನವೀಯತೆ ಬೆಳೆಸಿಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿದರು'.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಶ್ರೀಮತಿ ಬಿ. ಟಿ. ಲಲಿತಾ ನಾಯಕ್‌ರವರು 'ಇಂದಿನ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ಜೀವನಚಿತ್ರಣವನ್ನು ಮನದಟ್ಟು ಮಾಡಿಕೊಂಡು; ನ್ಯಾಯ, ನೀತಿಗೆ ದ್ರೋಹ ಬಗೆದರೆ ಹೋರಾಟದ ಮನೋಭಾವನೆ ಬೆಳೆಸಿಕೊಳ್ಳಬೇಕೆಂಬ ಅರ್ಥಪೂರ್ಣ ಮಾತುಗಳನ್ನಾಡಿದರು. ಸತ್ಪ್ರಜೆಗಳಾಗಿ ದೇಶಸೇವೆ ಮಾಡುವಂತಾಗಬೇಕೆಂದು ಕರೆಕೊಟ್ಟರು'.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಸನ್ಮಾನ್ಯ ಶಾಸಕ ಶ್ರೀ ಎ. ಟಿ. ರಾಮಸ್ವಾಮಿಯವರು 'ಶ್ರೀ ಎನ್. ಪದ್ಮನಾಭರವರು ಹಲವು ವರ್ಷಗಳಿಂದ ಚಿರಪರಿಚಿತರು, ಕೇಂದ್ರ ಗ್ರಂಥಾಲಯದ ಅಧಿಕಾರಿಗಳಾಗಿ ನಿವೃತ್ತರಾದವರು. ಶ್ರೀಯುತರು ಹೃದಯವಂತರು, ಸಮಾಜದ ಸ್ವಾಸ್ಥ್ಯದ ಬಗ್ಗೆ ಕಾಳಜಿವುಳ್ಳವರು. ಅಂಥವರು ಈ ಕಾರ್ಯಕ್ರಮ ಏರ್ಪಡಿಸಿದ್ದು ಅಭಿಮಾನದ ಸಂಗತಿ. ಇಂತಹ ಗಣ್ಯರನ್ನು ಕರೆಸಿ ಕಾರ್ಯಕ್ರಮದ ಗೌರವವನ್ನು ಹೆಚ್ಚಿಸಿದ ಶ್ರೀ ಎನ್. ಪದ್ಮನಾಭ ರಾವ್‌ರವರಿಗೆ ಮನಸಾರೆ ಅಭಿನಂದಿಸುತ್ತೇನೆಂದು ನುಡಿದರು'.

ಪ್ರಾಸ್ತಾವಿಕ ಭಾಷಣದಲ್ಲಿ ಲೇಖಕರು ಈ ಪುಸ್ತಕ ಪ್ರಕಟಣೆ ಕುರಿತು ಕಿರುಪರಿಚಯವನ್ನು ನೀಡಿ ಶುಭಹಾರೈಸಿದರು. ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸ್ಲೈಡ್ಸ್ ರೂಪದಲ್ಲಿ ವಸ್ತುಪ್ರದರ್ಶನವನ್ನು ಲೇಖಕರು ಏರ್ಪಡಿಸಿದ್ದು ಆಕರ್ಷಣೀಯ ಮತ್ತು ಅರ್ಥಪೂರ್ಣವಾಗಿತ್ತು.

ಕಾರ್ಯಕ್ರಮವು ಶ್ರೀ ಎಸ್. ಎಸ್. ಪಡಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಇದರ ಮೊದಲು ಶ್ರೀ ಎಸ್. ಎಸ್. ಪಡಶೆಟ್ಟಿ ಮತ್ತು ಶ್ರೀ ರಮೇಶ ಜಮದಗ್ನಿಯವರು ಸುಶ್ರಾವ್ಯವಾದ ಸುಗಮ ಸಂಗೀತ, ಭಾವಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಕಳೆಕೊಟ್ಟರು. ಈ ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಮದಾಪುರ ಸುಬ್ಬಣ್ಣನವರು ಅಚ್ಚುಕಟ್ಟಾಗಿ ನಿರೂಪಿಸಿ ಅತಿಥಿಗಳಿಗೆ ಹಾಗೂ ಸಭಿಕರಿಗೆ ವಂದನಾರ್ಪಣೆ ಮಾಡಿದರು. ಕೊನೆಗೆ ಲಘು ಭೋಜನದ ವ್ಯವಸ್ಥೆಯೊಂದಿಗೆ ಸಭೆಯು ಸಮಾಪ್ತಿಗೊಂಡಿತು.

**– ಎನ್. ಪದ್ಮನಾಭ ರಾವ್,** *ಲೇಖಕರು*
*ಹಾಗೂ ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ, ಬೆಂಗಳೂರು*

# ಹಗಲೆಲ್ಲಾ ಮತ್ತು ಸಂಸಾರದ ಕಥೆ

**ಡಾ. ವೈ. ಸುದರ್ಶನ್ ರಾವ್, ಉಡುಪಿ**
**ಮೊಬೈಲ್ : 9845136322**

ನಾವು ಮೂವರು ಹೌಸ್ ಸರ್ಜನ್ನರು ಒಂದು ಟೇಬಲ್‌ನ ಸುತ್ತು ಕುಳಿತು ಮೆಡಿಕಲ್ OPDಯಲ್ಲಿದ್ದ ಓರ್ವ ರೋಗಿಯನ್ನು ಪರೀಕ್ಷಿಸುತ್ತಿದ್ದೆವು. ನಾನು ಉಡುಪಿಯ ಕಡೆಯವನು. ಹುಬ್ಬಳ್ಳಿಯ ಕನ್ನಡಕ್ಕೂ, ನಮ್ಮ ಕನ್ನಡಕ್ಕೂ ಅಜಗಜಾಂತರ ವ್ಯತ್ಯಾಸ. ನಮ್ಮ ಕನ್ನಡದ ಮಾತುಗಳು ನಾಟಕದ ಸಂಭಾಷಣೆಗಳಂತೆ ಅವರಿಗೆ ಕೇಳಿಸಿದರೆ ಅವರ ಕನ್ನಡ ನಮಗೆ ಬೈದಾಡಿಕೊಂಡಂತೆ ಅನಿಸುತ್ತದೆ. ಅಷ್ಟು ಮಾತ್ರವಲ್ಲದೆ, ಕೆಲವು ಶಬ್ದಗಳ ಅರ್ಥಕ್ಕೆ ಹೋಲಿಕೆಯೇ ಇಲ್ಲ. ಉದಾಹರಣೆಗೆ 'ಮೈ ತುರಿಕೆ' ಬರುವುದಕ್ಕೆ ಅಲ್ಲಿ 'ತಿಂಡಿ ಬಿಡುವುದು' ಅನ್ನುತ್ತಾರೆ. 'ಸುಸ್ತಾಗುವುದಕ್ಕೆ' 'ಕೈಕಾಲು ಹರಿಯುವುದು' ಎನ್ನುತ್ತಾರೆ. 'ಬೇಧಿಯಾಗುವುದಕ್ಕೆ' 'ಹೊಟ್ಟೆ ಜಾಡಿಸುವುದು' ಅನ್ನುತ್ತಾರೆ. ಹೀಗಾಗಿ ಮೊದಮೊದಲು OPDಯಲ್ಲಿ ಕುಳಿತಿದ್ದಾಗ ಈ ಶಬ್ದಗಳ ಅರ್ಥದ ಅರಿವಿಲ್ಲದ್ದ ರಿಂದ ನನ್ನ ಪ್ರತಿಕ್ರಿಯೆಯು ಉಳಿದವರಿಗೆ ನಾಟಕೀಯ ಮಾತುಗಳ ರಂಜನೆಯೊಂದಿಗೆ ಹಾಸ್ಯದ ಹೊನಲನ್ನು ಹರಿಸುತ್ತಿತ್ತು.

ಒಂದು ದಿನ ಒಬ್ಬ ಹೆಣ್ಣುಮಗಳು ಔಷಧಿಗೆ ಬಂದವಳು "ಹಗಲೆಲ್ಲಾ ಹೊಟ್ಟೆ ನೋಯಿಸುತ್ರೀ" ಅಂದಳು. ಮತ್ತೆ ರಾತ್ರಿ ಹೊಟ್ಟೆ ನೋಯುವುದಿಲ್ಲವೇ ಎಂದು ಕೇಳಿದೆ ನಾನು. ರಾತ್ರಿಯೂ ನೋಯಿಸುತ್ತೆ ಎಂದಳು ಅವಳು. ಮತ್ತು ಯಾಕೆ ಹಗಲಿನ ನೋವನ್ನಷ್ಟೇ ಹೇಳುತ್ತಾಳೆ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡು ಮದ್ದು ಬರೆದುಕೊಟ್ಟೆ. ಸ್ವಲ್ಪ ಹೊತ್ತಿನಲ್ಲಿ ಇನ್ನೊಬ್ಬಳು ಬಂದಳು. "ಬೆನ್ನುನೋವ್ರಿ" ಅಂದಳು. ಯಾವಾಗಾ?... ಹಗಲೆಲ್ಲಾ! ರಾತ್ರಿನೂ. ಇದೊಳ್ಳೆ ವಿಚಿತ್ರವಾಯಿತಲ್ಲಾ ಎಂದು ಗುಣುಗುಟ್ಟುತ್ತಾ ಔಷಧಿ ಬರೆದುಕೊಟ್ಟೆ. ಮತ್ತೊಬ್ಬಳು ಬಂದಳು. ಅವಳಿಗೆ ತಲೆಶೂಲೆ. ಅದೂ ಹಗಲೆಲ್ಲಾ, ಮತ್ತೆ ರಾತ್ರಿ? ರಾತ್ರಿನೂ ಇದೆ! ನನಗೆ ತಲೆ ಕೆಟ್ಟಿತು. ಹಗಲೂ ನೋವಿದೆ, ರಾತ್ರಿನೂ ನೋವಿದೆ. ಹಾಗಿರುವಾಗ ಹಗಲೆಲ್ಲಾ ನೋವು ಅಂತ ಯಾಕನ್ನುತ್ತಿದ್ದೀರಾ ಎಂದು ಪ್ರಶ್ನೆ ಹಾಕಿದೆ. ಪಾಪ, ಹಳ್ಳಿ ಹೆಂಗಸು, ನನ್ನ ವ್ಯಾಕರಣದ ಪ್ರಶ್ನೆ ಅವಳಿಗೆ ಅರ್ಥವಾಗಲಿಲ್ಲ. ಹಗಲೆಲ್ಲಾ ನೋಯಿಸುತ್ತೆ ಅದಕ್ಕೆ ಅಂದಳು. ಅಷ್ಟು ಹೊತ್ತಿಗೆ ಬಳಿಯಲ್ಲಿ ಕುಳಿತಿದ್ದ ಮಿತ್ರ ರಾಘವೇಂದ್ರ ನಮ್ಮ ಸಂಭಾಷಣೆ ಗಮನಿಸಿ ಹೇಳಿದ, "ಲೇ... ಹುಬ್ಬಳ್ಳಿ ಭಾಷೆಯಲ್ಲಿ 'ಹಗಲೆಲ್ಲಾ' ಅಂದರೆ 'ದಿನವಿಡೀ' ಎಂದು ಅರ್ಥ. 'ಹಗಲೆಲ್ಲಾ' ಅಂದರೆ ಹಗಲು ಮತ್ತು ರಾತ್ರಿ ತಿಳೀತಾ..." ಅಲ್ಲಿಗೆ ಸಂಶಯ ಪರಿಹಾರವಾಯಿತು.

ಇನ್ನೊಂದು ಬಾರಿ ಇಬ್ಬರು ಹೆಣ್ಣುಮಕ್ಕಳು, ಒಬ್ಬಳು ವಯಸ್ಸಾದ ಹೆಂಗಸು ಹಾಗೂ ಹದಿನೆಂಟು ಇಪ್ಪತ್ತು ವರ್ಷದ ಯುವತಿ ಒಬ್ಬ ಗಂಡಸನ್ನು ಕರಕೊಂಡು ಬಂದರು. ಅವನನ್ನು ತನ್ನ ಮಗ ಹಾಗೂ ಈಕೆಯ ಗಂಡ ಎಂದು ಹಿರಿಯಾಕೆ ಪರಿಚಯಿಸಿದರು. 'ಇವನಿಗೆ ಸಂಸಾರ ಮಾಡಲಿಕ್ಕೆ ಬರುವುದಿಲ್ರಿ ಛಲೋ ಔಷಧಿ ಕೊಡ್ರಿ' ಎಂದು ತಾಯಿ ನುಡಿದಳು. ಇವನಿಗೆ ಸಂಸಾರ ನಡೆಸಲು ಬರದಿದ್ದರೆ ಡಾಕ್ಟ್ರು ಔಷಧಿ ಕೊಟ್ಟರೆ ಸರಿಯಾಗುತ್ತಾನೆಯೇ? ಎಂದು ನನಗೆ ಬಹಳ ಆಶ್ಚರ್ಯವಾಯಿತು. ನಾನು ನೇರವಾಗಿ ಉತ್ತರಿಸಿದೆ. "ಅಮ್ಮಾ ಇದು ಆಸ್ಪತ್ರೆ, ಅವನು ಸಂಸಾರ ಸರಿಯಾಗಿ ನಡೆಸ್ತಾ ಇಲ್ಲವಾದರೆ ಯಾರಾದರೂ ಹಿರಿಯರ ಹತ್ತಿರ ಬುದ್ಧಿ ಹೇಳಿಸು" ಅಂದೆ. ತಾಯಿ ಕಕ್ಕಾಬಿಕ್ಕಿಯಾದಳು. "ನೀವಾ ಹೀಗಂದ್ರ ಹ್ಯಾಂಗ್ರೀ? ಅವನಿಗೆ ಶಕ್ತಿ (ಸಂಸಾರ ನಡೆಸುವಂತಹ ಶಕ್ತಿ!) ಬರುವಂತಹ ಔಷಧಿ ಕೊಡ್ರಿ" ಎಂದಳು. ನಾನು ಪುನಃ ಮಿತ್ರ ರಾಘವೇಂದ್ರನ ಮೊರೆಹೋದೆ. ಅವ ಮೆತ್ತಗೆ, 'ಸಂಸಾರ ನಡೆಸೋಕೆ ಬರಲ್ಲಾ ಅಂದರೆ ನಪುಂಸಕತೆ ಎಂದರ್ಥ (ಇಂಪೊಟೆನ್ಸ್)' ಎಂದು ಜ್ಞಾನೋದಯವಿತ್ತ. ಅನಂತರ ನಾನು ನಗುತ್ತಾ ಔಷಧ ಬರೆದುಕೊಟ್ಟೆ. ಈಗ ಉಡುಪಿಯಲ್ಲಿ ಸಂಸಾರ ಸರಿಯಾಗಿ ನಡೆಯುತ್ತಿಲ್ಲ ಎಂಬ ಮಾತುಗಳು ಸಂಭಾಷಣೆಯಲ್ಲಿ ಇಣುಕಿದಾಗ ಇಲ್ಲಿ ಅದರ ಅರ್ಥವೇ ಬೇರೆಯಾದರೂ ಈ ಪ್ರಸಂಗ ನೆನಪಾಗುತ್ತದೆ. ●

# ಶ್ರೀ ಶಾರದಾಂಬಾ ಭಜನಾ ಮಂಡಳಿ
# ಶ್ರೀ ಸುಬ್ರಹ್ಮಣ್ಯ ಸದನ, ಮಂಗಳೂರು



ಶ್ರೀ ಶಾರದಾಂಬಾ ಭಜನಾ ಮಂಡಳಿಯ ಪ್ರಥಮ ವರ್ಷದ ವಾರ್ಷಿಕೋತ್ಸವವನ್ನು ಕೊರೊನಾ ಹಾವಳಿಯಿಂದ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್ ವಾಟ್ಸಾಪ್‌ನಲ್ಲಿ ಕಾರ್ಯಕ್ರಮ ಮಾಡುವುದೆಂದು ನಿಶ್ಚಯಿಸಿದರು. ಈ ಬಗ್ಗೆ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ಹಾಗೂ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಯುವವೇದಿಕೆ ಅಧ್ಯಕ್ಷ ಶ್ರೀ ಮನೀಷ್ ರಾವ್ ಇವರನ್ನು ಭಜನಾ ಮಂಡಳಿಯ ವಾಟ್ಸಾಪ್‌ಗೆ ಸೇರಿಸಿ ಕಾರ್ಯಕ್ರಮ ನಡೆಸಿದರು. 12ನೇ ತಾರೀಕು ಮಧ್ಯಾಹ್ನ 12–00 ಗಂಟೆಯ ಒಳಗೆ ಮಂಡಳಿಯ ಎಲ್ಲಾ ಸದಸ್ಯರು ಕೆಲವು ಭಜನೆಗಳನ್ನು ಹಾಡಿ ಆಡಿಯೋ ಮಾಡಿ ಗ್ರೂಪ್‌ಗೆ ಕಳುಹಿಸಿದರು.

ಮಧ್ಯಾಹ್ನ 3–00 ಗಂಟೆಗೆ ಅಧ್ಯಕ್ಷೆಯವರ ಮಗಳು ಶ್ರೀಮತಿ ರೇಷ್ಮಾ ವಸಂತ್, ಮೊಮ್ಮಗ ಆನೀಶ್‌ರವರು ಭಜನಾ ತಂಡದ ಮೊದಲಿನ ಕಾರ್ಯಕ್ರಮಗಳ ತುಣುಕುಗಳನ್ನು ಸೇರಿಸಿ ಯೂಟ್ಯೂಬ್‌ನಲ್ಲಿ ವೀಡಿಯೋ ಪ್ರದರ್ಶಿಸಿದರು. ವೇದಿಕೆಯಲ್ಲಿ ಭಜನಾ ಮಂಡಳಿಯ ಅಧ್ಯಕ್ಷರು ಸ್ವಾಗತ ಭಾಷಣ ಮಾಡಿದರು. ಅವರ ಎದುರಿಗೆ ಸದನದ ಎಲ್ಲಾ ಅತಿಥಿಗಳು ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಶ್ರೀಮತಿ ಕುಸುಮಾ ನವೀನ್ ಕುಮಾರ್ ಹಾಗೂ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಮಾಡಿದರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಮಗೆ ಭಜನೆ ಹಾಡುಗಳನ್ನು ಕಲಿಸಿದ ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಹಾಗೂ ಶ್ರೀಮತಿ ಶಾರದಾ ರಾವ್‌ರವರನ್ನು ಫಲಪುಷ್ಪ, ಮುಖಕವಚ (Mask) ನೀಡಿ ಅಭಿನಂದಿಸಲಾಯಿತು.

ಅನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗುರುಗಳು ವಾಟ್ಸಾಪ್‌ನಲ್ಲಿಯೇ ಕಲಿಸಿದ ಭಜನೆಯನ್ನು ಶ್ರೀಮತಿ ಆಶಾ ರವೀಂದ್ರನಾಥರವರು ಹಾರ್ಮೋನಿಯಂನೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ಶ್ರೀಮತಿ ಶಾರದಾ ಎಸ್. ರಾವ್‌ರವರು ಸ್ಯಾಕ್ಸೊಫೋನ್ ನುಡಿಸಿ ಎಲ್ಲರ ಮೆಚ್ಚುಗೆಯನ್ನು ಗಳಿಸಿದರು. ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್‌ರವರು ಹಾಡಿದ 'ಚಪ್ಪಾಳೆ – ಚಪ್ಪಾಳೆ' ಹಾಡು ಸದಸ್ಯರಿಗೆ ಸ್ಫೂರ್ತಿ ನೀಡಿತು.

ಅನಂತರ ಈ ಮೊದಲೇ ಸದನದ ಸದಸ್ಯರು ಅಭಿನಯಿಸಿದ 'ಶಿವಶಕ್ತಿ ರೂಪಕ'ದ ಸಮುದ್ರ ಮಥನದ ಒಂದು ದೃಶ್ಯವನ್ನು ತೋರಿಸಲಾಯಿತು. ಲಾಕ್‌ಡೌನ್ ಮೊದಲು ಹಲವಾರು ಕಡೆಗಳಲ್ಲಿ, ದೇವಸ್ಥಾನಗಳಲ್ಲಿ ಮಂಡಳಿಯವರು ನಡೆಸಿಕೊಟ್ಟ ಭಜನಾ ಕಾರ್ಯಕ್ರಮಗಳ ದೃಶ್ಯಗಳನ್ನು ಪ್ರದರ್ಶಿಸಲಾಯಿತು.

ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಸಹಕರಿಸಿದ ಸರ್ವರಿಗೂ ವಂದನಾರ್ಪಣೆಯನ್ನು ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ನಡೆಸಿಕೊಟ್ಟರು. ಅಭೂತಪೂರ್ವ ವಾಟ್ಸಾಪ್ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಯಾರೂ ನಡೆಸದ ರೀತಿಯಲ್ಲಿ ವೀಡಿಯೋ ಪ್ರದರ್ಶಿಸಿದ ಕಾರಣ ಅಪಾರ ಜನಮೆಚ್ಚುಗೆಯನ್ನು ಗಳಿಸಿತು. ಕಾರ್ಯಕ್ರಮದ ಎಲ್ಲಾ ದೃಶ್ಯಗಳನ್ನು ವೀಡಿಯೋದಲ್ಲಿಯೇ ಅಳವಡಿಸಿ ಕಾರ್ಯಕ್ರಮ ರೂಪಿಸಿದ ಶ್ರೀಮತಿ ರೇಷ್ಮಾ ವಸಂತ್ ಹಾಗೂ ಆನೀಶ್ ರಾವ್‌ರವರು ಅಭಿನಂದನಾರ್ಹರಾಗಿದ್ದಾರೆ.

*ವರದಿ : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಮೊ. 739155359*

## ಮಂಗಳೂರು ಎ.ಪಿ.ಎಂ.ಸಿ. ನಾಮನಿರ್ದೇಶಿತ ಸದಸ್ಯರಾಗಿ
# ಪ್ರವೀಣ ಕುಮಾರ್ ಅದ್ಯಪಾಡಿ



ಅದ್ಯಪಾಡಿ ದಿ। ವಾಸುದೇವ ರಾವ್ ಮತ್ತು ಶ್ರೀಮತಿ ರತ್ನಾವತಿ ಕುಕ್ಕೆಹಳ್ಳಿ ಯವರ ಪುತ್ರರಾದ ಶ್ರೀ ಪ್ರವೀಣ ಕುಮಾರ್ ಅದ್ಯಪಾಡಿಯವರನ್ನು ಕರ್ನಾಟಕ ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿದೆ. ಮಂಗಳೂರಿನ ಎಸ್.ಡಿ.ಎಂ. ಕಾನೂನು ಕಾಲೇಜಿನಲ್ಲಿ ಕಾನೂನು ಅಭ್ಯಸಿಸಿರುವ ಶ್ರೀ ಪ್ರವೀಣ ಕುಮಾರ್ ಅದ್ಯಪಾಡಿಯವರು ವಿದ್ಯಾರ್ಥಿಯಾಗಿರುವಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (R.S.S.) ಕಾರ್ಯಕರ್ತರಾಗಿದ್ದವರು. ಕಾನೂನು ಕಾಲೇಜಿನಲ್ಲಿ ಸಕ್ರಿಯ ಎನ್.ಎಸ್.ಎಸ್. ಕಾರ್ಯಕರ್ತರಾಗಿ, ಕಾನೂನು ಪದವಿ ಗಳಿಸಿದ ಅನಂತರ ಮಂಗಳೂರಿನಲ್ಲಿ ವಕೀಲರಾದ ಶ್ರೀ ನಾರಾಯಣ ಸೋಮಯಾಜಿ ಮತ್ತು ಶ್ರೀ ವಿವೇಕಾನಂದ ಪನಿಯಾಲರಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದರು. ವಕೀಲರಾಗಿದ್ದಾಗಲೇ, ಸಂಜೆ ಪಾಳಿಯಲ್ಲಿ ಹೊಸದಿಗಂತ ಕನ್ನಡ ದಿನಪತ್ರಿಕೆಯಲ್ಲಿ ಉದ್ಯೋಗ ನಿಭಾಯಿಸಿಕೊಂಡು ಅನಂತರ ಪೂರ್ಣ ಪ್ರಮಾಣದ ಸ್ವಂತ ಕಚೇರಿಯನ್ನು ಮಂಗಳೂರು ಮತ್ತು ಬಜ್ಪೆಯಲ್ಲಿ ಪ್ರಾರಂಭಿಸಿದರು ಮತ್ತು ಈ ಅವಧಿಯಲ್ಲಿ ಎರಡು ಬಾರಿ ಅದ್ಯಪಾಡಿ ಗ್ರಾಮ ಸಮಿತಿಯ ಬಿ.ಜೆ.ಪಿ.ಯ ಕಾರ್ಯದರ್ಶಿ ಹಾಗೂ ಒಂದು ಬಾರಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅನಂತರ ಮಂಗಳೂರು ಜೆ.ಸಿ.ಐ. ವಕೀಲ ವೇದಿಕೆಯ ಅಧ್ಯಕ್ಷರಾಗಿದ್ದಾರೆ. ಪ್ರಸ್ತುತ ರಾಷ್ಟ್ರೀಯ ಸ್ವಯಂಸೇವಕ ಸಂಘದ ತಾಲೂಕು ಜವಾಬ್ದಾರಿಯನ್ನು ಇವರಿಗೆ ವಹಿಸಲಾಗಿದೆ. ಎರಡು ಸಹಕಾರಿ ಸಂಘಗಳು, ಮೂರು ವಾಣಿಜ್ಯ ಬ್ಯಾಂಕ್‌ಗಳು, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಇದರ ಕಾನೂನು ಸಲಹೆಗಾರರಾಗಿದ್ದಾರಲ್ಲದೆ, ಕೇಂದ್ರ ಸರಕಾರದ ನೋಟರಿಯೂ, APMCಯ ನಾಮನಿರ್ದೇಶಿತ ಸದಸ್ಯರೂ ಆಗಿದ್ದಾರೆ. ಪ್ರವೀಣ ಕುಮಾರ್ ಅದ್ಯಪಾಡಿ ಇವರ ಪತ್ನಿ ಶ್ರೀಮತಿ ಮಂಜುಳಾ ಧರ್ಮಸ್ಥಳದವರು. ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಗ ಪ್ರೇಮದೀಪ್ ಅದ್ಯಪಾಡಿ ಮತ್ತು ಮಗಳು ವೈಷ್ಣವಿ ರಾವ್ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಜೀವನದಲ್ಲಿ ಯಶಸ್ಸಿನ ಮೆಟ್ಟಲನ್ನು ಹಂತ ಹಂತವಾಗಿ ಏರುತ್ತಿರುವ ಪ್ರವೀಣರಿಗೆ 'ಜ್ಞಾನಶಕ್ತಿ' ಬಳಗದ ಅಭಿನಂದನೆಗಳು.

# ಅಪಾರ ಕೀರ್ತಿ ಗಳಿಸಿ...




ಬೆಂಗಳೂರಿನ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 22ನೇಯ ಘಟಿಕೋತ್ಸವದಲ್ಲಿ ಬ್ರಹ್ಮಾವರದ ಡಾ. ಗೌತಮಿ ಕೆ. ಅವರಿಗೆ ದಂತವೈದ್ಯಕೀಯ ಪದವಿಯಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಮತ್ತು ವಿಶ್ವವಿದ್ಯಾಲಯದ ಮೂರು ಚಿನ್ನದ ಪದಕ ಲಭಿಸಿವೆ. ಮಂಗಳೂರಿನ ಎ. ಬಿ. ಶೆಟ್ಟಿ ದಂತವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ (ಎಂ.ಡಿ.ಎಸ್.) ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇವರು ಬ್ರಹ್ಮಾವರದ ಬಿ.ಎಸ್.ಎನ್.ಎಲ್. ನಿವೃತ್ತ ಎಜಿಎಂ ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀಮತಿ ಸುಮಂಗಲ ಅವರ ಪುತ್ರಿ.





ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು
D.K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

# ಶ್ರೀ ಶಾರದಾ ಮಂಟಪದ ಭೋಜನಾಲಯದ ನವೀಕರಣ

ಶ್ರೀ ಶಾರದಾ ಮಂಟಪವು 1972ರಲ್ಲಿ ಆರಂಭಗೊಂಡಾಗಿನಿಂದ ಹಂತ ಹಂತವಾಗಿ ವಿಸ್ತರಣೆಗೊಳ್ಳುತ್ತಾ, ಅಭಿವೃದ್ಧಿ ಹೊಂದುತ್ತಾ, ನೂತನ ಅನುಕೂಲತೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದಿದ್ದು ಅದರ ಯಶಸ್ಸಿನ ಹಿಂದೆ ಆಯಾ ಆಡಳಿತ ಮಂಡಳಿಗಳ ಪದಾಧಿಕಾರಿಗಳ ಮುಂದಾಲೋಚನೆ, ದಾನಿಗಳ ಬೆಂಬಲ ಹಾಗೂ ಸಮಾಜಬಾಂಧವರ ಹಿತಾಶೀರ್ವಾದ ಅಡಗಿದೆ ಎಂದರೆ ತಪ್ಪಾಗಲಾರದು. ಶ್ರೀ ಶಾರದಾ ಮಂಟಪವು ಉಡುಪಿಯ ಗ್ರಾಹಕರ ಪ್ರಥಮ ಪ್ರಾಶಸ್ತ್ಯದ ಸಭಾಂಗಣವಾಗಿದ್ದು ಅವರ ಅಗತ್ಯಗಳನ್ನು ಕಾಲಕಾಲಕ್ಕೆ ಮನಗಂಡು ಅದನ್ನು ಸರಿಯಾದ ಸಮಯಕ್ಕೆ ಅಳವಡಿಸಿಕೊಳ್ಳುತ್ತಾ ಪ್ರಥಮ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಅಂತೆಯೇ ಹಿಂದಿನ ಶ್ರೀ ವೈ. ಭುಜನೇಂದ್ರ ರಾವ್ ನೇತೃತ್ವದ ಆಡಳಿತ ಮಂಡಳಿಯು ಮುಖ್ಯ ಸಭಾಂಗಣಕ್ಕೆ ವಿಟ್ರಿಫೈಡ್ ಟೈಲ್ಸ್ ಅಳವಡಿಸಿ ಸಭಾಂಗಣದ ಅಂದವನ್ನು ಹೆಚ್ಚಿಸಿತ್ತು. ಅದಕ್ಕೂ ಹಿಂದಿನ ಶ್ರೀ ಸಿ. ಎಸ್. ರಾವ್ ನೇತೃತ್ವದ ಆಡಳಿತ ಮಂಡಳಿಯು ಸಭಾಂಗಣಕ್ಕೆ ಬಾಲ್ಕನಿಯನ್ನು ನಿರ್ಮಿಸಿ ಸುಂದರ ಛಾವಣಿಯನ್ನು ಹೊದಿಸಿತ್ತು. ಅಂತೆಯೇ ಶ್ರೀ ಮಂಜುನಾಥ ಹೆಬ್ಬಾರ್ ಅಧ್ಯಕ್ಷರಾಗಿರುವ ಪ್ರಸಕ್ತ ಆಡಳಿತ ಮಂಡಳಿಯು ಭೋಜನಾಲಯದ ಸಮಗ್ರ ನವೀಕರಣವನ್ನು 50 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದೊಂದಿಗೆ ಕೈಗೆತ್ತಿಕೊಂಡಿದೆ. ಕ್ಯಾಟರಿಂಗ್ ಉದ್ಯಮದಲ್ಲಿ ಹೆಸರುವಾಸಿಯಾಗಿರುವ ಶ್ರೀ ಹೆಬ್ಬಾರ್‌ರವರು ಭೋಜನಕೂಟಗಳ ಸೂಕ್ಷ್ಮವನ್ನು ಅರಿತವರಾಗಿದ್ದು ಅವರ ಮುತುವರ್ಜಿಯಲ್ಲಿ ಕೆಲಸವು ಭರದಿಂದ ಸಾಗುತ್ತಿದೆ. ಈ ನವೀಕರಣದಿಂದ ಭೋಜನಾಲಯಕ್ಕೆ ತಂಪಾದ ಛಾವಣಿ, ಸುಂದರವಾದ ನೆಲ, ಸ್ವಚ್ಛ ಗಾಳಿ-ಬೆಳಕುಗಳುಳ್ಳ ಆರೋಗ್ಯಕರ ಪರಿಸರದ ಜೊತೆಗೆ ಹೆಚ್ಚುವರಿಯಾಗಿ ಭೋಜನಕ್ಕೆ ಹೆಚ್ಚು ವಿಸ್ತಾರವಾದ ಸ್ಥಳ ಹಾಗೂ ಆಧುನಿಕ ಶೌಚಾಲಯಗಳು ಲಭ್ಯವಾಗಲಿವೆ.

ಉಡುಪಿಯ ಸ್ಥಾನಿಕ ಬಾಂಧವರು 'ಐಕಾನ್' ಎಂದೇ ಪರಿಗಣಿಸುವ ಶ್ರೀ ಶಾರದಾ ಮಂಟಪದ ಈ ಕಾಮಗಾರಿಗೆ ನಮ್ಮೆಲ್ಲಾ ಸಮಾಜಬಾಂಧವರ ಸಲಹೆ ಹಾಗೂ ತನು-ಮನ-ಧನದ ಸಹಕಾರವನ್ನು ಆಡಳಿತ ಮಂಡಳಿಯು ಅಪೇಕ್ಷಿಸಲಿದೆ. ವಿಶೇಷ ಕೊಡುಗೆಯಾಗಿ ರೂ. 30,000/- ದೇಣಿಗೆಯನ್ನು ನೀಡುವ ದಾನಿಗಳಿಗೆ ಮುಂದಿನ 10 ವರ್ಷಗಳಲ್ಲಿ ಲಭ್ಯತೆಯನ್ನು ಅವಲಂಬಿಸಿ ಒಂದು ಬಾರಿ ಒಂದು ಕಾರ್ಯಕ್ರಮಕ್ಕೆ ಸಭಾಂಗಣವನ್ನು ಉಚಿತವಾಗಿ ನೀಡಲಾಗುವುದು. ರೂ. 10,000/-ಕ್ಕೂ ಅಧಿಕ ದೇಣಿಗೆಯಿತ್ತವರ ಹೆಸರನ್ನು ಶಾಶ್ವತ ಫಲಕದಲ್ಲಿ ಮುದ್ರಿಸಲಾಗುವುದು. ಈ ಕೊಡುಗೆಯು ಕಾಮಗಾರಿ ಸಂಪೂರ್ಣಗೊಳ್ಳುವ ತನಕ ಮಾತ್ರ ಊರ್ಜಿತದಲ್ಲಿರಲಿದೆ. ಸಭಾಂಗಣಗಳು ತುಟ್ಟಿಯಾಗುತ್ತಿರುವ ಹಿನ್ನಲೆಯಲ್ಲಿ ಸಮಾಜಬಾಂಧವರು ಈ ಸದವಕಾಶದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ. ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ ಕುಮಾರ್‌ರವರನ್ನು 9343560647ರಲ್ಲಿ ಸಂಪರ್ಕಿಸಲು ಕೋರುತ್ತೇವೆ.





**ತಮ್ಮ ದೇಣಿಗೆಯನ್ನು ಸಂಘದ ಈ ಕೆಳಗಿನ ಖಾತೆಗೆ ವರ್ಗಾಯಿಸಬಹುದು.**

**ಖಾತೆಯ ಹೆಸರು :**

**STHANIKA BRAHMANA SANGHA (R.)**
**SYNDICATE BANK**
**CARSTREET BRANCH UDUPI**
**SB A/c No. : 01092200002928**
**IFSC CODE : SYNB0000109**


ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**

'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4



ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮ ನವೀನ್ ಕುಮಾರ್
ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್
ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಕೆ. ಲಕ್ಷ್ಮೀನಾರಾಯಣ ಶರ್ಮ ✆ : 9448043969
ಅತಿಕಾರಬೈಲು, ವಗ್ಗ 8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**



# ಪ್ರಕಟಣೆ

2020-2021ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.,ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ, ಎಮ್.ಎಸ್.ಸಿ., ಎಮ್.ಕಾಂ., ಸಿಎ, ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿಹಾಳೆಯಲ್ಲಿ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2020-2021ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಈ ಸಾಲಿನಲ್ಲಿ ಡಾ. ದಯಾನಂದ ಎಸ್. ರಾವ್ ಎಜ್ಯುಕೇಶನಲ್ ಟ್ರಸ್ಟ್, ಬೆಂಗಳೂರು ಇವರಿಂದ ರೂ. 5,00,001.00ನ್ನು ವಿದ್ಯಾರ್ಥಿವೇತನ ನಿಧಿಯನ್ನಾಗಿ ಕೃತಜ್ಞತಾಪೂರ್ವಕವಾಗಿ ಶ್ರೀ ಸಭೆಯು ಸ್ವೀಕರಿಸಿರುತ್ತದೆ.

**ಶ್ರೀ ಕರುಣ್ ರಾವ್ ಬೆಳ್ಳೆ**
(ಕಾರ್ಯದರ್ಶಿ)

ದಿನಾಂಕ : 08-06-2020


ಪತ್ರಿಕೆಗೆ ಶುಭ ಬಯಸುವ-



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ-



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTERS**



**Dealers in : C. C. Camera, Theft Alarm, Remote Locks**
**Computers Hardware and Peripherals**
**Computer Sales & Services**

**1st Floor, Bharath Building, P. M. Rao Road, Hampankatta, Mangaluru - 575 001**

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702
**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ -

**G. K. KOLPE**
**House No. 7-3-31-D1,'Vaishnavi' (Upstairs)**
**Vadiraja 2nd Cross, Bailakere, Udupi - 576 101**
**Mobile : 9449903002**


# ಪ್ರಕಟಣೆ

*(1ನೇ ಪುಟದಿಂದ ಮುಂದುವರಿದುದು)*

## ವಿವರ

1. ಈ ಯೋಜನೆ ಕೋರೋನಾ ಮಹಾವ್ಯಾಧಿಯ ಆರ್ಥಿಕ ದುಷ್ಪರಿಣಾಮದಿಂದ ಸಾಂಪತ್ತಿಕ ಸಂಕಷ್ಟಕ್ಕೊಳಗಾದವರಿಗೆ ಮೀಸಲು.
2. ವ್ಯಾಪ್ತಿ : ಪ್ರಾದೇಶಿಕ ಗಡಿರೇಖೆಗಳಿಲ್ಲದೆ ನಮ್ಮ ಸಮಾಜದ ಎಲ್ಲಾ ಬಾಂಧವರಿಗೆ.
3. ಅರ್ಹತೆ : ಯಾವುದೇ ತರಗತಿಯಲ್ಲಿ ಕಲಿಯುತ್ತಿರುವ ಸಾಂಪತ್ತಿಕವಾಗಿ ತೊಂದರೆಗೊಳಗಾದ ವಿದ್ಯಾರ್ಥಿಗಳು.
4. ಧನಸಹಾಯವನ್ನು ಸಾಲವೇತನ ರೂಪದಲ್ಲಿ ಕೊಡಲಾಗುವುದು.
5. ವಾರ್ಷಿಕ ವರಮಾನ ರೂ. 6,00,000/-ಕ್ಕಿಂತ ಕಡಿಮೆ ಇರುವವರು ಅರ್ಹರು.
6. ಸಾಲವನ್ನು 15 ತಿಂಗಳಲ್ಲಿ ಮರುಪಾವತಿಸಿದರೆ 3% ಸರಳ ಬಡ್ಡಿಯಲ್ಲಿ ಹಾಗೂ 30 ತಿಂಗಳಲ್ಲಿ ಸಾಲ ಮರುಪಾವತಿಸುವುದಾದರೆ 5% ಸರಳಬಡ್ಡಿಯಲ್ಲಿ ಸಾಲ ನೀಡಲಾಗುವುದು.
7. ತುರ್ತು ಸಾಲ ಸೌಲಭ್ಯಕ್ಕಾಗಿ ಅರ್ಜಿ ಕಳುಹಿಸಬೇಕಾದ ವಿಳಾಸ :
   **ಸೆಕ್ರೆಟರಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.)**
   **ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು - 575 003**
8. ಸಂಪರ್ಕಿಸಬೇಕಾದ ದೂರವಾಣಿ :
   **ಕರುಣ್ ರಾವ್ ಬೆಳ್ಳೆ ✆ : 7337634359 ಡಾ. ಎ. ಪಿ. ಕೃಷ್ಣ ✆ : 9845213997**

**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು**

## ಅರ್ಜಿ ನಮೂನೆ

ತಾ. : ..............................

1. ವಿದ್ಯಾರ್ಥಿಯ ಹೆಸರು :
2. ತಾಯಿಯ ಹೆಸರು :
3. ತಂದೆಯ ಹೆಸರು :
4. ಮನೆಯ ಪೂರ್ಣ ವಿಳಾಸ :
5. ದೂರವಾಣಿ ಸಂಖ್ಯೆ :
6. ಕಲಿಯುತ್ತಿರುವ ತರಗತಿ :
7. ಕಲಿಯುತ್ತಿರುವ ಶಾಲೆ / ಕಾಲೇಜಿನ ಹೆಸರು, ವಿಳಾಸ :
8. ಸಾಲರೂಪದಲ್ಲಿ ಬೇಕಾಗಬಹುದಾದ ಮೊಬಲಗು :
9. ದೃಢೀಕರಣ :

ನಮಗೆ ಕೊಡಮಾಡುವ ಸಾಲರೂಪದ ಧನಸಹಾಯವನ್ನು ಮಗ / ಮಗಳ ವಿದ್ಯಾಭ್ಯಾಸದ ಖರ್ಚಿಗೆ ಮಾತ್ರ ವಿನಿಯೋಗಿಸುತ್ತೇವೆ. ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಇವರ ಶರತ್ತಿಗೆ ಅನುಗುಣವಾಗಿ ಈ ಸಾಲದ ಮೊಬಲಗನ್ನು ಹಿಂದಿರುಗಿಸಲು ಬಾಧ್ಯಸ್ಥರಾಗಿರುತ್ತೇವೆ.

*ವಿದ್ಯಾರ್ಥಿಯ ಸಹಿ* *ತಾಯಿ / ತಂದೆಯ ಸಹಿ*

## ಭವತೀ ಭಿಕ್ಷಾಂ ದೇಹಿ..



ಶ್ರೀ ಆದರ್ಶ ಮತ್ತು ಶ್ರೀಮತಿ ಜಯಾ ಇವರ ಪುತ್ರ **ಚಿ ಅಭಿನವ** (ಶ್ರೀ ಬಿ. ಗೋವಿಂದ ರಾವ್ ಮತ್ತು ಶ್ರೀಮತಿ ಅರುಂಧತಿ ಅವರ ಮೊಮ್ಮಗ) ಇವನ ಉಪನಯನ ಸಮಾರಂಭವು ಬೆಂಗಳೂರಿನ ಜಯನಗರದ 'ಶ್ರೀ ಉಮಾಮಹೇಶ್ವರ ಆಧ್ಯಾತ್ಮ ಮಂದಿರ'ದಲ್ಲಿ ತಾರೀಕು 2-07-2020ನೇ ಗುರುವಾರ ನೆರವೇರಿತು.


**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

Prop. : *Kishore Kumar Kedige*
Ph. : 2231524
M. : 9880726325



**KYADIGE AUTOMOBILES**
**Opp. to D. P. Stores Main Road, B. C. Road, Bantwal Tq.**
***Dealers in : 2 & 3 WHEELERS SPARES***






## ಜ್ಞಾನ – ನುಡಿ

ಎಲ್ಲರ ಆಸೆಗಳನ್ನು ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ,
ಎಲ್ಲರ ದುರಾಸೆಗಳನ್ನಲ್ಲ. – **ಮಹಾತ್ಮ ಗಾಂಧೀಜಿ**

## ಜ್ಞಾನ – ಗಾದೆ

- ತಾಳಿ ಕಟ್ಟರೆ ಕೂಲಿ ಕೇಂಡೆ.
- ತಡ್ಪೆ ಬೊಟ್ಟುತ್ ಪಿಲಿ ಗಿಡಾಯಿ ಲೆಕ್ಕ.
- ತಪ್ಪುನ್ ಎದುರೆಟ್ ಪಣ್, ಎಡ್ಡೆನ್ ಪಿರೊವೊಟು ಪಣ್.

## ಜ್ಞಾನ – ನಗೆ

**ಉಪಾಯ !**

**ಆಕೆ** : ಏನೇ, ನಿನ್ನ ಗುಂಡ ಮಾವ ಇದ್ದಕ್ಕಿದ್ದ ಹಾಗೆ ನಾಪತ್ತೆಯಾಗಿದ್ದಾರೆ?

**ಈಕೆ** : ಓಹ್ ಅದಾ, ಕೊರೋನಾ ಬಂದಾಗಿಂದ ಅಡುಗೆ ಮಾಡಿ ಹಾಕಿ ಸಾಕಾಗೋಯ್ತು. ಅದಕ್ಕೆ ಉಪಾಯ ಮಾಡಿ ನಾಳೆ ನನ್ನ ತಮ್ಮ ವಿದೇಶದಿಂದ ಬರ್ತಾನೆ ಅಂದೆ. ಅಷ್ಟಕ್ಕೆ ಅವ್ರು ಹೆದರಿ ಹಳ್ಳಿ ಮನೆಗೆ ಹೋದ್ರು !

## ಜ್ಞಾನ – ವಿಸ್ಮಯ

ಸರ್ಪಗಳು ಇಲ್ಲದ ದೇಶ ಹವಾಯಿ ದ್ವೀಪ.

ಭೂಮಿಯ ಮೇಲೆ ಪಾದವಿಡದ ಪಕ್ಷಿ ಹರಿಯಾಲ ಪಕ್ಷಿ.

ಬೆಂಕಿ ಸುರಿಸುವ ಮರವುಳ್ಳ ದೇಶ ಮಲೇಷ್ಯಾ.



*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*